ಶ್ರೀ ಟಿ. ಸಿ. ಬನಪ್ಪ.—ನನ್ನ ಪ್ರಶ್ನೆ supervision, organisation, administration and direction ಇವಕ್ಕೆ ಇಷ್ಟು ಹೆಚ್ಚು ಖರ್ಚಾಗುತ್ತದೆ, ಇದೇ ರೀತಿ ಬಾಕಿ ಇಲಾಖೆಗಳಲ್ಲಿಯೂ ಇದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ, ಇಲಾಖೆ ಇಲಾಖೆಗೂ ವ್ಯತ್ಯಾಸವಾಗುತ್ತದೆ. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಇಲಾಖೆಯಲ್ಲೇ ಹೀಗೆ.

ಶ್ರೀ ಟಿ. ಸಿ. ಬನಪ್ಪ.—ವಯಸ್ಕರ ಶಿಕ್ಷಣ ಸಮಿತಿಯನ್ನು ರದ್ದು ಮಾಡಬೇಕೆಂದು ಬಹಳ ದಿವಸಗಳಿಂದ ಸದನ್ಯರಿಂದ ಒತ್ತಾಯ ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವರು ಆ ರೀತಿ ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಟಿ. ಸಿ. ಬನಪ್ಪ.—ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿದ್ಯಾ ಸುಧಾರಣಾ ಸಮಿತಿಯವರು ಅಕ್ಷರ ಪ್ರಚಾರ ಕಾರ್ಯವನ್ನು ವಿದ್ಯಾ ಇಲಾಖೆಗೆ ಸೇರಿಸಿ, ವಿದ್ಯಾ ಪೀಠಗಳನ್ನು ಮಾತ್ರ ಇವರಿಗೆ ವಹಿಸುವುದು ಸೂಕ್ತವೆಂದು ಅಭಿಪ್ರಾಯ ಪಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಟಿ. ಸಿ. ಬನಪ್ಪ.—ವಿದ್ಯಾಭ್ಯಾಸದ ಇಲಾಖೆಗೆ ವಹಿಸುವುದರಿಂದ ಕೆಲಸ ಸರಿಯಾಗಿ ನಡೆಯುವುದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಪರಿಶೀಲಿಸಿ ನೋಡಬೇಕಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅಕ್ಷರಾಭ್ಯಾಸದ ಕಡೆಗೆ ಗಮನಕೊಡುವುದನ್ನು ಕಡಮೆಮಾಡಿ ಹಳ್ಳಿಗಳಲ್ಲಿ ಹೊಸದಾಗಿ ಪುಸ್ತಕ ಭಂಡಾರ ಮುಂತಾದುವನ್ನು ತೆರೆಯಲು ಹೆಚ್ಚು ಗಮನ ಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಕೆಲಸವನ್ನು ಇನ್ನೂ ಹೆಚ್ಚು ಯಶಸ್ವಿಯಾಗಿ ಮಾಡಬೇಕಾದರೆ ಹೆಚ್ಚು ಸಿಬ್ಬಂದಿ ಕೊಡುವುದು ಅಗತ್ಯವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೆಚ್ಚು ಬೇಕಾದರೆ, ಮಾಡಬೇಕಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಿರಾ ತಾಲ್ಲೂಕಿನಲ್ಲಿ ವಿದ್ಯಾಪೀಠವನ್ನು ಪ್ರಾರಂಭ ಮಾಡುವುದಕ್ಕೆ ಏನು ಮಾಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ವಯಸ್ಕರ ಶಿಕ್ಷಣ ಸಮಿತಿಗೆ ಸಂಬಂಧಪಟ್ಟದ್ದಾದರೂ, ಅದನ್ನು ಸ್ಥಾಪಿಸಬೇಕೆಂದು ಯೋಚನೆಮಾಡಿದ್ದೇವೆ.

ಶ್ರೀ ಡಿ. ಆರ್. ಕರಿಗೌಡ.—ಈ ವಯಸ್ಕರ ಶಿಕ್ಷಣ ಸಮಿತಿಗೆ ಇಷ್ಟು ಹಣ ಖರ್ಚು ಮಾಡುತ್ತಿದ್ದೀರಿ. ಇದಕ್ಕೆ ಬದಲು ಒಂದೊಂದು ಸ್ಕೂಲಿಗೆ 500 ರೂಪಾಯಿಗಳಂತೆ ಕೊಟ್ಟರೆ ಸುಮಾರು ಸಾವಿರ ಸ್ಕೂಲುಗಳನ್ನು ಸ್ಥಾಪನೆ ಮಾಡಬಹುದಲ್ಲವೆ !

ಶ್ರೀ ಎ. ಜಿ. ರಾಮಚಂದ್ರರಾವ್.—ಅದೂ ಒಂದು ಅಭಿಪ್ರಾಯ.

ಶ್ರೀ ಡಿ. ಆರ್. ಕರಿಗೌಡ.—ಆ ರೀತಿ ಮಾಡಿದರೆ ಒಳ್ಳೆಯದಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದೊಂದು ರೀತಿ, ಇದೊಂದು ರೀತಿ.

ಶ್ರೀ ಡಿ. ಆರ್. ಕರಿಗೌಡ.—ಈಗ ಯಾವ ಊರಿನಲ್ಲಿ ಸ್ಕೂಲಿದೆಯೋ ಅಲ್ಲಿತಾನೆ ಈ ಸಮಿತಿಯವರು ಕೆಲಸಮಾಡುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೂ ಇದೆ, ಹೀಗೂ ಇದೆ.

ಶ್ರೀ ಡಿ. ಆರ್. ಕರಿಗೌಡ.—ಈ ಕೆಲಸ ಸರಿಯಾಗಿ ನಡೆಯಬೇಕಾದರೆ ಸರ್ಕಾರ ಹೆಚ್ಚಿನ ಹತೋಟಿಯನ್ನಿಟ್ಟುಕೊಂಡು ಸಮಿತಿಯನ್ನೇರ್ಪಾಡು ಮಾಡುವುದೊಳ್ಳೆಯದಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಸಂಸ್ಥಾನದಲ್ಲಿ ಶೇಕಡ 20ರಷ್ಟು ಮಂದಿ ಅಕ್ಷರಸ್ಥರಾಗಿರುವುದಕ್ಕೆ ವಯಸ್ಕರ ಶಿಕ್ಷಣ ಸಮಿತಿ ಕಾರಣವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದೂ ಒಂದು ಕಾರಣ.

Cultural Development (Amount spent for 1954-55.)

Q.—389. Sri Mali MARIYAPPA (Pavagada).—

Will tne Government be pleased to state :—

The amount spent on Cultural Development for 1954-55 ?

A.—Sri A. G. RAMACHANDRA RAO (Minister for Law and Education).—

Rs. 66,500 up to 31-1-1955.

ಶ್ರೀ ಮಾಲ ಮರಿಯಪ್ಪ.—ಮಾರ್ಚ್ ಅಖ್ಯೆರುವರೆಗೆ ಇನ್ನೂ ಎಷ್ಟು ಹಣ ಖರ್ಚುಮಾಡಬೇಕೆಂದು ಸರ್ಕಾರದವರು ಅಭಿಪ್ರಾಯಪಟ್ಟಿದ್ದಾರೆ ?

* ಶ್ರೀ ಎ. ಜಿ. ರಾಮಚಂದ್ರರಾವ್.—ಬಡ್ಜೆಟ್ಟಿನಲ್ಲಿ ಒದಗಿಸಿರುವುದು ಗೊತ್ತಿದೆ. ಇಷ್ಟೇ ಖರ್ಚಾಗುತ್ತದೆ ಅಥವಾ ಇಷ್ಟೇ ಖರ್ಚಾಗಬೇಕೆಂದು ನಿಗದಿಮಾಡಿಲ್ಲ.

ಶ್ರೀ ಮಾಲ ಮರಿಯಪ್ಪ.—ಈ ವರ್ಷದ ಅಖ್ಯೆರಿನೊಳಗೆ ಹೆಚ್ಚು ಮಾಟಿಂಗ್‌ಗಳನ್ನು ಮಾಡಿ ಹಣವನ್ನು ಖರ್ಚುಮಾಡಬೇಕೆಂದು ಸರ್ಕಾರದವರು ಸರ್ಕ್ಯುಲರ್ ಕಳುಹಿಸಿದ್ದಾರೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆರೀತಿಯಾವ ಸರ್ಕ್ಯುಲರ್ ಕಳುಹಿಸಿದ್ದೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಮಾಲ ಮರಿಯಪ್ಪ.—ಸಂಸ್ಕೃತಿ ಪ್ರಸಾರ ಸಭೆಗಳು ನಡೆದ ಸಂದರ್ಭದಲ್ಲಿ ವರದಿಯನ್ನು ಸರ್ಕಾರದವರು ತರಿಸಿಕೊಳ್ಳುತ್ತಿದ್ದಾರೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಡೈರೆಕ್ಟರಿಗೆ ಹೋಗಿ, ಅವರಿಂದ ನಮಗೆ ಬರುತ್ತದೆ.

ಶ್ರೀ ಮಾಲ ಮರಿಯಪ್ಪ.—ಡೈರೆಕ್ಟರಿಗೆ ಬಂದದ್ದು ತಮ್ಮಲ್ಲಗೆ ಬರುತ್ತದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಂಸ್ಕೃತಿ ಪ್ರಸಾರ ಡೈರೆಕ್ಟರವರ ಒಂದು ಸಮಿತಿಗೆ ಬರುತ್ತಿದೆ, ಅಲ್ಲಿಂದ ನಮಗೆ ಬರುತ್ತದೆ.

ಶ್ರೀ ಮಾಲ ಮರಿಯಪ್ಪ.—ವರದಿಗಳಲ್ಲಿ ಜನರು ಸಭೆಗೆ ಹಾಜರಾಗಿರತಕ್ಕಂಥ ಸಂಖ್ಯೆ ಏನಾದರೂ ತಿಳಿಸುತ್ತಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ತಿಳಿಸುತ್ತಿದ್ದಾರೆ.

ಶ್ರೀ ಮಾಲ ಮರಿಯಪ್ಪ.—ಅದು ಹೇಗಿದೆ ಎಂದು ಸರ್ಕಾರದ ಅಭಿಪ್ರಾಯ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಮರ್ಪಕವಾಗಿದೆ ಎಂದು.

ಶ್ರೀ ಮಾಲ ಮರಿಯಪ್ಪ.—ಕೆಲವು ಕಡೆಗಳಲ್ಲಿ ಆರು ಜನಕ್ಕಿಂತಲೂ ಹೆಚ್ಚು ಸೇರದೆ ಇರತಕ್ಕಂಥಾದ್ದು ಏನಾದರೂ ರಿಪೊರ್ಟಿನಲ್ಲಿ ಅಡಕವಾಗಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂತಹ ಸಂದರ್ಭಗಳೂ ಇವೆ.

ಶ್ರೀ ಮಾಲ ಮರಿಯಪ್ಪ.—ಈ ಕಾರ್ಯಕ್ರಮವನ್ನು ಅಷ್ಟಾಗಿ ಮುಂದುವರಿಸಬೇಕಾದ್ದಿಲ್ಲವೆಂದು ಈ ಮಾನ್ಯ ಸಭೆಯ ಅನೇಕ ಸದಸ್ಯರುಗಳು ಹೇಳಿದ್ದು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ಸದಸ್ಯರ ಅಭಿಪ್ರಾಯ ಹಾಗಿರುವುದು ಗೊತ್ತಾಗಿದೆ.

ಶ್ರೀ ಮಾಲ ಮರಿಯಪ್ಪ.—ಬಹಳ ಜನ ಸದಸ್ಯರು ಈ ಸಂಸ್ಕೃತಿ ಪ್ರಚಾರ ಅಷ್ಟಾಗಿ ಬೇಕಾಗಿಲ್ಲ ಎಂದು ಹೇಳಿರತಕ್ಕಂಥಾದ್ದು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಕೆ. ಹನುಮಂತಯ್ಯ.—ಬಹುಮಂದಿ ಈ ಸಭೆಯಲ್ಲೂ ಮತ್ತು ದೇಶದಲ್ಲೂ ಅದನ್ನು ಸ್ವಾಗತಿಸಿದ್ದಾರೆ ಮತ್ತ ಮೆಚ್ಚಿದ್ದಾರೆ.

ಶ್ರೀ ಮಾಲ ಮರಿಯಪ್ಪ.—ಮಾನ್ಯ ಸಭೆಯ ಸದಸ್ಯರ ಅಭಿಪ್ರಾಯ ನಾನು ಕೇಳುತ್ತಿದ್ದೇನೆ.

ಶ್ರೀ ಕೆ. ಹನುಮಂತಯ್ಯ.—ಮಾನ್ಯ ಸಭೆಯಲ್ಲಿ ಬಹುಮತ ಅದರ ಪರವಾಗಿದೆ ಎನ್ನತಕ್ಕಂಥ ವಿಷಯವನ್ನು ತಿಳಿದುಕೊಂಡಿದ್ದೇನೆ.

ಶ್ರೀ ಮಾಲ ಮರಿಯಪ್ಪ.—ಮಾನ್ಯ ಸದಸ್ಯರುಗಳಾದ ಶ್ರೀ ಶಿವಪ್ಪನವರ ಭಾಷಣವನ್ನೂ ಮತ್ತು ಶ್ರೀ ನಾಗರಾಜಮೂರ್ತಿಗಳ ಭಾಷಣವನ್ನೂ ಸರ್ಕಾರದವರು ಗಮನಿಸಿದ್ದಾರೆಯೇ?

ಶ್ರೀ ಕೆ. ಹನುಮಂತಯ್ಯ.—ಅವು ಸಂಸ್ಕೃತಿ ಪ್ರಚಾರ ಭಾಷಣಗಳಲ್ಲ.

ಶ್ರೀ ಮಾಲ ಮರಿಯಪ್ಪ.—ದಯವಿಟ್ಟು ಅವರು ಮಾಡಿರತಕ್ಕಂಥ ಸಂಸ್ಕೃತಿ ಪ್ರಚಾರಕ್ಕೆ ಸಂಬಂಧಪಟ್ಟ ಮಾತುಗಳನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆಯೇ?

ಶ್ರೀ ಕೆ. ಹನುಮಂತಯ್ಯ.—ಸರ್ಕಾರದವರು ಈ ವಿಷಯದಲ್ಲಿ ಬರತಕ್ಕಂಥ ಟೀಕೆಗಳನ್ನೆಲ್ಲಾ ಸಾವಧಾನವಾಗಿ ಪರಿಶೀಲಿಸುತ್ತಾರೆ ಮತ್ತು ಅದನ್ನು ತಿದ್ದುವುದಕ್ಕೂ ಪ್ರಯತ್ನಮಾಡುತ್ತಾರೆ. ಆದರೆ ಇದರ ಉದ್ದೇಶ ಮತ್ತು ವ್ಯಾಪ್ತಿ ಬಹಳ ಸಮರ್ಪಕವಾಗಿದೆ ಎಂಬುದನ್ನು ಧೈರ್ಯವಾಗಿ ಹೇಳಬಲ್ಲೆ.

ಶ್ರೀ ಮಾಲ ಮರಿಯಪ್ಪ.—ಇದನ್ನು ಇನ್ನೂ ಯಾವುದಾದರೂ ರೀತಿಯಲ್ಲಿ ಮಾರ್ಪಡಿಸಬೇಕು ಎಂದು ಯಾರಾದರೂ ಸದಸ್ಯರು ಸಲಹೆಮಾಡಿದ್ದಾರೆಯೇ?

ಶ್ರೀ ಕೆ. ಹನುಮಂತಯ್ಯ.—ಏನಾದರೂ ಸಲಹೆ ಇದ್ದರೆ ತಾವು ಹೇಳಿ.

ಶ್ರೀ ಮಾಲ ಮರಿಯಪ್ಪ.—ಅನೇಕ ಸದಸ್ಯರು ಸಹ ಈಗ ಮಾಡುತ್ತ ಇರತಕ್ಕಂಥಾದ್ದು ಸಮರ್ಪಕವಾಗಿಲ್ಲ ಮತ್ತು ಆಯಾ ಸ್ಥಳಗಳಲ್ಲಿ ಇರತಕ್ಕಂಥ ಸ್ಕೂಲು ಮಾಸ್ತರುಗಳು ಮತ್ತು ಭಾರತ, ರಾಮಾಯಣ ಓದುವುದರಲ್ಲಿ ಹೆಚ್ಚು ಪರಿಶ್ರಮ ಹೊಂದಿರತಕ್ಕಂಥವರಿಗೆ ಅವಕಾಶ ಕೊಟ್ಟರೆ ಖರ್ಚು ಕಡಿಮೆಯಾಗುತ್ತದೆ ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂದು ಹೇಳಿದ್ದಾರಲ್ಲವೆ?

ಶ್ರೀ ಕೆ. ಹನುಮಂತಯ್ಯ.—ಸ್ಥಳದಲ್ಲಿ ಯಾರಾದರೂ ಚೆನ್ನಾಗಿ ಗಮಕಿಗಳಾಗಿರುವವರು ಮತ್ತು ಉಪನ್ಯಾಸಕರು ಇದ್ದರೆ ಅಂಥವರಿಗೆ ಈಗಲೂ ಅವಕಾಶವಿದ್ದೇ ಇದೆ.

ಶ್ರೀ ಎ. ಭೀಮಪ್ಪನಾಯಕ್.—ತಾಲ್ಲೂಕು ಡೆವಲಪ್‌ಮೆಂಟು ಕಮಿಟಿಗಳು ಅಥವಾ ಅಂತಹ ಸಂಸ್ಥೆಗಳಿಗೆ ಈ ಪ್ರಚಾರ ಮಾಡುವ ಕಾರ್ಯವನ್ನು ಬಿಟ್ಟು ಕೊಟ್ಟು ಅದಕ್ಕೆ ಸ್ವಲ್ಪ allotment ಕೊಟ್ಟು ಈ ಕೆಲಸವನ್ನು ಅವರು ಮಾಡುವ ಹಾಗೆ ಮಾಡುವುದು ಒಳ್ಳೆಯದಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಸೂಚನೆ ಸೂಕ್ತ ವಾಗಿದೆ.

ಶ್ರೀ ಡಿ. ಆರ್. ಕರಿಗೌಡ.—ಈ ಸಂಸ್ಕೃತಿ ಪ್ರಚಾರಕ್ಕೆ ಸಂಬಂಧಪಟ್ಟ Demandಗೆ ಮಾನ್ಯ ಸಭೆ ಒಪ್ಪಿಗೆ ಕೊಟ್ಟತ್ತಲ್ಲವೆ?

ಶ್ರೀ ಕೆ. ಹನುಮಂತಯ್ಯ.—ಹೌದು.

ಶ್ರೀ ಟಿ. ಸಿ. ಬನಪ್ಪ.—ಟೌನ್‌ಗಳಲ್ಲಿ ಮಾತ್ರವೇ ಸಂಸ್ಕೃತಿ ಪ್ರಚಾರ ಜಾಸ್ತಿಯಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಹನುಮಂತಯ್ಯ.—ಬಹುಶಃ ಅಲ್ಲಿ ಅವಶ್ಯಕತೆ ಜಾಸ್ತಿಯಾಗಿರಬೇಕು.

ಶ್ರೀ ಟಿ. ಸಿ. ಬನಪ್ಪ.—ಹಾಗಾದರೆ ಬೆಂಗಳೂರಿನಲ್ಲಿ ಅಸಂಸ್ಕೃತರು ಜಾಸ್ತಿ ಇದ್ದಾರೆ ಎಂದು ತಿಳಿದು ಕೊಳ್ಳೋಣವೇ?

ಶ್ರೀ ಕೆ. ಹನುಮಂತಯ್ಯ.—ಇದು ತಾವು ಹೇಳತಕ್ಕ ಅಭಿಪ್ರಾಯ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈ ಸಭೆಯಲ್ಲೆಲ್ಲಾ ತಮ್ಮ ಗುಂಪೇ ಜಾಸ್ತಿ ಅಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು. ಎಲ್ಲರೂ ಸಂಸ್ಕೃತಿ ಪ್ರಚಾರದ ಪರವಾಗಿರತಕ್ಕಂಥವರು.

ಶ್ರೀ ವಿ. ಆರ್. ನಾಯ್ಡು.—ಈ ಸಂಸ್ಕೃತಿ ಪ್ರಚಾರದಲ್ಲಿ ಭಾಷಣ ಮಾಡುವವರಿಗೆ ಏನಾದರೂ allowance ಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೊಡುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಸಂಸ್ಕೃತಿ ಪ್ರಚಾರ ಭಾಷಣ ಮಾಡುವಾಗ allowance ತೆಗೆದುಕೊಂಡು ಮಾಡುತ್ತಾರೆ. ಅದಕ್ಕಿಂತಲೂ ಫ್ರೀಯಾಗಿ ಮಾಡುತ್ತೇವೆಂದರೆ ನಮ್ಮಂತಹವರನ್ನು ಯಾಕೆ ತೆಗೆದುಕೊಳ್ಳಬಾರದು?

ಶ್ರೀ ಕೆ. ಹನುಮಂತಯ್ಯ.—ಯಾರು ಭಾಷಣ ಮಾಡುವುದಕ್ಕೆ ಕರೆದರೂ ನಿಮ್ಮಂಥವರು ಧಾರಾಳವಾಗಿ ಹೋಗಬಹುದು.

ಶ್ರೀ ವಿ. ಆರ್. ನಾಯ್ಡು.—ಒಂದು ಅರಿಕೆಮಾಡಿಕೊಳ್ಳುತ್ತೇನೆ. ಸಂಸ್ಕೃತಿ ಪ್ರಚಾರದಿಂದ ದೇಶದಲ್ಲಿ ಬಹುಮಟ್ಟಿಗೆ ನ್ಯಾಯ ದೊರಕದೆ ಎಂದು ಹೇಳುತ್ತೇನೆ. ಅದಕ್ಕೆ ನೀವು ಏನು ಹೇಳುತ್ತೀರಿ?

(ಉತ್ತರವಿಲ್ಲ.)

ಶ್ರೀ ಎಕ್. ಹುಚ್ಚಮಾಸ್ತಿಗೌಡ.—ಈಗತಾನೇ ಶ್ರೀ ಮಾಲ ಮರಿಯಪ್ಪನವರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ. ಈ ಸಂಬಂಧದಲ್ಲಿ ಉಪಾಧ್ಯಾಯರಲ್ಲಿ ಯಾರು ಯಾರು ಗಮಕಿಗಳಾಗಿದ್ದಾರೋ ಅವರನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ನಿರ್ದಿಷ್ಟವಾಗಿ ಇಲಾಖಾಧಿಕಾರಿಗಳಿಗೆ ತಿಳಿಸುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ತಾವು ಹೇಳಿರುವುದು ನ್ಯಾಯವಾದುದು. ಶ್ರೀ ಮಾಲ ಮರಿಯಪ್ಪನವರ suggestion note ಮಾಡಿಕೊಂಡಿದ್ದೇನೆ. ಈಗ ಒಂದು ಪಟ್ಟಿ ತಯಾರುಮಾಡಿದ್ದಾರೆ. ಈ ಪಟ್ಟಿಯಲ್ಲಿ ಇರುವವರನ್ನು notify ಮಾಡಿದ್ದಾರೆ. ಇನ್ನುಮೇಲೆ ಯಾರು ಯಾರು ಸ್ಥಳಗಳಲ್ಲಿ ಈ ಕೆಲಸಕ್ಕೆ ಅರ್ಹತೆಗಳನ್ನು ಪಡೆದಿದ್ದಾರೋ ಅವರನ್ನೂ ಇದಕ್ಕೆ ಆಹ್ವಾನಿಸಬೇಕು ಎಂದು direction ಕಳುಹಿಸಲಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಪಟ್ಟಿಯಲ್ಲಿ ಸೇರಿಸಲ್ಪಟ್ಟಿರತಕ್ಕಂಥವರು ಸಭೆ ನಡೆದ ಕಾಲದಲ್ಲಿ ಬಾರದೆ ಇರುವವರಿಗೆ ಮುಂಚೆಯೇ ಅವರು ಬರಬೇಕು ಎಂದು ತಿಳಿಸುವುದು ಸೂಕ್ತವಲ್ಲವೇ ?

Sri K. HANUMANTHAIYA.—It is purely voluntary. ಅವರು ಹೋಗಬಹುದು ಅಥವಾ ಬಿಡಬಹುದು. ಅವರು ಸರ್ಕಾರಿ ನೌಕರರಲ್ಲ, ಅವರು ಹೋಗಲೇಬೇಕು, ಅಥವಾ ಒಪ್ಪಿಕೊಳ್ಳಬೇಕು ಎಂದು ವಿಧಾಯಕವಿಲ್ಲ. ಪ್ರಖ್ಯಾತಿ ಪಡೆದಿರುವವರ ಒಂದು ಪಟ್ಟಿ ಮಾತ್ರ ಮಾಡಿದ್ದಾರೆ. ಅವರನ್ನು ಆಹ್ವಾನಿಸಿದರೆ ಅವರು ಹೋಗಬಹುದು, ಇಲ್ಲವೆ ಹೋಗದೆ ಇರಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅನೇಕವೇಳೆ ಅಂಥವರು ಈ ಸಭೆಗಳಿಗೆ ಬಾರದೆ ಇದ್ದರೆ ಅಂಥವರನ್ನು ಬಿಟ್ಟು ಬೇರೆಯವರನ್ನು ಸೇರಿಸಿಕೊಳ್ಳುವುದು ಸೂಕ್ತವಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಅವರು ಬಾರದೆ ಇರುವುದಕ್ಕೆ ನಾನಾ ಕಾರಣಗಳಿರಬಹುದು. ಒಪ್ಪಿಕೊಂಡು ಬಾರದೆ ಇದ್ದರೆ ಅವರದು ತಪ್ಪು ಎನ್ನಬಹುದು. ಬಹುಶಃ ಅವರನ್ನು ಕೇಳಿದೆ ಒಂದು ವೇಳೆ ಹಸ್ತಪತ್ರಿಕೆಗಳನ್ನು ಪ್ರಿಂಟ್ ಮಾಡಿಸಿದ್ದರೆ, ಅವರಿಗೆ ಸಾಕಾದಷ್ಟು ಕಾಲಾವಕಾಶ ಇಲ್ಲದಿದ್ದರೆ ಅಂಥದನ್ನು ಏಮರ್ಶೆ ಮಾಡಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಒಪ್ಪಿಕೊಂಡು ಬಾರದೆ ಇರುವವರ ವಿಷಯ ನಾನು ಹೇಳಿದ್ದೇನೆ. ಅಂಥವರಿಂದ ತೊಂದರೆಯಾಗುವುದರಿಂದ ಅವರನ್ನು ಪಟ್ಟಿಯಿಂದ ಬಿಟ್ಟು ಬೇರೆಯವರನ್ನು ಸೇರಿಸಿಕೊಂಡು ಕೆಲಸ ಕಾರ್ಯಗಳನ್ನು ನಡೆಸುವುದು ಸೂಕ್ತವಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಶ್ರೀಮಾನ್ ಭೀಮಪ್ಪ ನಾಯಕರು ಹೇಳಿರುವ ಹಾಗೆ, Taluk Advisory Boards ಏನಾದರೂ ಮಾಡಿದಾಗ ಸ್ಥಳೀಯ ಮುಖಂಡರಿಗೆ ಈ ವಿಷಯವನ್ನು ಬಿಟ್ಟರೆ ಇನ್ನೂ ಸಮರ್ಪಕವಾಗಿ ಕೆಲಸ ನಡೆಯುತ್ತದೆಂದು ನಾನು ಆಗಲೇ ಒಪ್ಪಿಕೊಂಡಿದ್ದೇನೆ.

Cultural Development Work in Chickmagalur District.

Q.—595. Sri Y. M. CHANDRASEKHARAIAH (Kadur).—

Will the Government be pleased to state :—

(*a*) the number of Cultural Development meetings held in each place of Chikmagalur District during 1954-55 (talukwar details to be given);

(*b*) the number of villages and towns where such meetings were held ;

(*c*) the amount of honorarium and T.A. spent for this development work ;

(*d*) the number of Cultural Development meetings held in each village and town of Kadur Taluk ;

(*e*) whether they are aware that the villagers have to be encouraged mostly by entrusting the cultural propaganda and puranasravana to the people of the taluks in which the villages are situated ;

(*f*) the steps taken for encouraging the public in the rural parts in this behalf ?

A.—Sri A. G. RAMACHANDRA RAO (Minister for Law and Education).—

(*a*)

		Meetings held
1.	Chickmagalur ...	7
2.	Tarikere ...	8
3.	Ajjampura ...	7
4.	Shivani ...	4
5.	Kadur ...	8
6.	Birur ...	7
7.	Sakrepatna ...	2
8.	Koppa ...	7
9.	Mudigere ...	6
10.	N. R. Pura ...	7
11.	Sringeri Jahgir ...	6
	Total ...	96

(*b*) (i) Villages ... 2
(ii) Towns ... 9

(*c*) Rs. 4,579-4-6 for 1954-55.

(*d*) (i) In villages ... 2 meetings
(ii) In towns ... 15 meetings

(*e*) Government are not in favour of such an arrangement.

(*f*) Suitable persons from all parts of the State have been selected for cultural programmes.

ಶ್ರೀ ವೈ. ಯಂ. ಚಂದ್ರಶೇಖರಯ್ಯ.—ಸಂಸ್ಕೃತಿ ಪ್ರಚಾರ ಸಭೆಗಳು ಈಗ ಬರೀ ಟೌನ್‌ಗಳಲ್ಲಿ ಮಾತ್ರ ಆಗುತ್ತಿವೆ, ಹಳ್ಳಿಗಳ ಕಡೆ ಆಗುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಹನುಮಂತಯ್ಯ.—ಹಳ್ಳಿಗಳಕಡೆ ನಾನೇ ಹೋಗಿ ಭಾಷಣ ಮಾಡಿದ್ದೇನೆ. ಅನೇಕ ಸಾರಿ ಹತ್ತು ಸಾವಿರಕ್ಕಿಂತಲೂ ಮೇಲ್ಪಟ್ಟು ಜನ ಸೇರಿದ್ದಾರೆ.

ಶ್ರೀ ವೈ ಎಂ. ಚಂದ್ರಶೇಖರಯ್ಯ.—11 ಸ್ಥಳಗಳಲ್ಲಿ ತಾವು ಸಭೆಗಳನ್ನು ಏರ್ಪಾಡು ಮಾಡಿದ್ದೀರಿ. ಇದರಲ್ಲಿ ಒಂಭತ್ತು ಟೌನ್‌ಗಳು ಮತ್ತು ಎರಡು ಮಾತ್ರ ಹಳ್ಳಿ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಉತ್ತರದಲ್ಲಿ ವಿವರಗಳನ್ನು ಕೊಟ್ಟಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—69 ಸಭೆಗಳಿಗೆ, 4,500 ಚಿಲ್ಲರೆ ರೂಪಾಯಿ ಖರ್ಚಾಗಿದೆ. ನಮ್ಮ ಸ್ನೇಹಿತರು ಹೇಳಿರುವ ಪ್ರಕಾರ ಅಲ್ಲಲ್ಲಿರತಕ್ಕ ಜನಗಳಿಂದ ಪ್ರಚಾರಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಉತ್ತರವನ್ನು ಆಗಲೇ ಕೊಟ್ಟಿದ್ದೇನೆ.